ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತನೆಯ ಅಧಿವೇಶನ
ಗುರುವಾರ, ದಿನಾಂಕ : 12 ನೇ ಮಾರ್ಚ್, 2020

ಬಿ.ಡಿಎ.ಗೆ ಪದೇ ಪದೇ ಎರವಲು ಸೇವೆ ಮೇಲೆ ನಿಯೋಜನೆಗೊಳ್ಳುತ್ತಿರುವ ಅಧಿಕಾರಿ/ನೌಕರರ ಬಗ್ಗೆ

ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ) :-

786 (724) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ವಿವಿಧ ಇಲಾಖೆಗಳಿಂದ ಎರವಲು/ಒಒಡಿ ಸೇವೆಯ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ಸಂಖ್ಯೆ ಎಷ್ಟು ; ಹೆಸರು, ಇಲಾಖೆ, ಹುದ್ದೆ ಮತ್ತು ಯಾವ ದಿನಾಂಕದಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ ; (ಮಾಹಿತಿ ನೀಡುವುದು)

(ಆ) ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಎರವಲು ಸೇವೆಯ ಅಧಿಕಾರಿ/ನೌಕರರು ಈ ಹಿಂದೆ ಎರವಲು ಸೇವೆಯ ಆಧಾರದಲ್ಲಿ ಬಿ.ಡಿ.ಎ.ಗೆ ನಿಯೋಜನೆಗೊಂಡಿದ್ದರೇ ; ಇದ್ದಲ್ಲಿ, ಅಂತಹವರ ಹೆಸರು, ಹುದ್ದೆ ಮತ್ತು ಎಷ್ಟು ಬಾರಿ ನಿಯೋಜನೆಗೊಂಡಿದ್ದರು ; (ವಿವರಗಳನ್ನು ನೀಡುವುದು)

(ಇ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಪದೇ ಪದೇ ಎರವಲು ಸೇವೆಯ ಆಧಾರದಲ್ಲಿ ನಿಯೋಜನೆಗೊಳ್ಳುವುದನ್ನು ತಪ್ಪಿಸಲು ಹಾಗೂ ಪ್ರಾಧಿಕಾರದ ನೌಕರರ ಕೆಲವು ಅನುಕೂಲತೆಗಳ ಹಿತದೃಷ್ಠಿಯಿಂದ ಪ್ರಾಧಿಕಾರದ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರಲು ಬಿ.ಡಿ.ಎ ನೌಕರರ ಸಂಘವು ತಿದ್ದುಪಡಿ ನಿಯಮಾವಳಿಗಳನ್ನು ಪ್ರಾಧಿಕಾರಕ್ಕೆ ಸಲ್ಲಿಸಿರುವುದು ನಿಜವೇ ; ಇದ್ದಲ್ಲಿ, ಯಾವ ದಿನಾಂಕದಂದು ಸಲ್ಲಿಸಲಾಗಿದೆ ; ಈ ಬಗ್ಗೆ ಕೈಗೊಂಡ ಕ್ರಮಗಳೇನು ; ಯಾವ ನಿರ್ದಿಷ್ಟ ದಿನಾಂಕದಂದು ತಿದ್ದುಪಡಿ ನಿಯಮಗಳನ್ನು ಜಾರಿಗೆ ತರಲಾಗುವುದು ;

(ಈ) ಇತರೆ ಇಲಾಖೆಗಳ ಅಧಿಕಾರಿ/ನೌಕರರ ಪ್ರಾಧಿಕಾರಕ್ಕೆ ಪದೇ ಪದೇ ಎರವಲು ಸೇವೆ ಮೇಲೆ ನಿಯೋಜನೆಗೊಳ್ಳುತ್ತಿರುವುದನ್ನು ತಪ್ಪಿಸಲು ಪ್ರಾಧಿಕಾರವು ಕೈಗೊಳ್ಳುವ ನಿರ್ದಿಷ್ಟ ಕ್ರಮಗಳೇನು ?